ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1460**
ಸದಸ್ಯರ ಹೆಸರು	ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	**19.03.2020**
ಉತ್ತರಿಸುವ ಸಚಿವರು	ಸನ್ಮಾನ್ಯ ಮುಖ್ಯಮಂತ್ರಿಗಳು

ಪ್ರಶ್ನೆ	ಉತ್ತರ
(ಅ) ರಾಜ್ಯದ ಎಷ್ಟು ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳ ಮೇಲೆ ಅಕ್ರಮ ಆಸ್ತಿ ಹೊಂದಿದ ಮತ್ತು ಲಂಚ ಪಡೆದ ಆರೋಪಗಳಿವೆ;	ರಾಜ್ಯದ 03 ಐ.ಎ.ಎಸ್ ಅಧಿಕಾರಿಗಳ ಮೇಲೆ ಅಕ್ರಮ ಆಸ್ತಿ ಹೊಂದಿದ ಮತ್ತು ಲಂಚ ಪಡೆದ ಆರೋಪಗಳಿವೆ. ರಾಜ್ಯದ 02 ಐ.ಪಿ.ಎಸ್., ಅಧಿಕಾರಿಗಳ ಮೇಲೆ ಅಕ್ರಮ ಆಸ್ತಿ ಹೊಂದಿದ ಮತ್ತು ಇಬ್ಬರು ಐ.ಪಿ.ಎಸ್., ಅಧಿಕಾರಿಗಳ ಮೇಲೆ ಲಂಚ ಪಡೆದ ಆರೋಪಗಳಿವೆ.
(ಆ) ರಾಜ್ಯದ ಎಷ್ಟು ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ; ಪ್ರಸ್ತುತ ಅವು ಯಾವ ಹಂತದಲ್ಲಿವೆ;	ರಾಜ್ಯದ 02 ಐ.ಎ.ಎಸ್ ಅಧಿಕಾರಿಗಳ ಮೇಲೆ ಹಾಗೂ 02 ಐ.ಪಿ.ಎಸ್., ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಪ್ರಸ್ತುತ ಸದರಿ ಪ್ರಕರಣಗಳು ವಿಚಾರಣಾ ಹಂತದಲ್ಲಿವೆ.
(ಇ) ಕೇಂದ್ರ ಸರ್ಕಾರ ಇತ್ತೀಚೆಗೆ ಲಂಚ ಪಡೆದ ಹಾಗೂ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ ಆರೋಪ ಇರುವ ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿಯ ಮೇಲೆ ಕಳುಹಿಸಿದಂತೆ ರಾಜ್ಯ ಸರ್ಕಾರವು ಲಂಚ ಪಡೆದ ಹಾಗೂ ಆದಾಯಕ್ಕಿಂತೆ ಹೆಚ್ಚಿನ ಆಸ್ತಿ ಹೊಂದಿದ ಆರೋಪ ಇರುವ ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿಯ ಮೇಲೆ ಕಳುಹಿಸುವ ಕುರಿತು ಸರ್ಕಾರದ ನಿಲುವೇನು?	ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿ ಮಾಡುವ ವಿಷಯವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಕಡತ ಸಂಖ್ಯೆ: ಇ–ಸಿಆಸುಇ 135 ಎಸ್ಎಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ